MVC No. 736/2024 (PW-01)

ದಿನಾಂಕ: 18-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ **:** ಅರ್ಜಿದಾರ ಪರ ಶ್ರೀ ಬಿ.ಬಿ.ಕೆ. ವಕೀಲರಿಂದ -

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ಸರಿ ಇರುತ್ತದೆ. (1) Complaint, (2) FIR, (3) Spot Mahazar with sketch, (4) Seizure Panchanama (5) MVI Report, (6) ಗಾಯದ ಪ್ರಮಾಣ ಪತ್ರ, (7) ಚಾರ್ಜ ಶೀಟ ಮತ್ತು ಒಂದು ಹೇಳಿಕೆ ಇವುಗಳ ದೃಢೀಕೃತ ಪ್ರತಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ-1 ರಿಂದ 7 ಎಂದು ಗುರ್ತಿಸಲಾಯಿತು.

2. ಒಂದು ಡಿಸಚಾರ್ಜ ಸಮ್ಮರಿ, ನ್ಯೂನತೆ ಪ್ರಮಾಣ ಪತ್ರ, X-ray ವರದಿ, ಆಸ್ಪತ್ರೆ, ಪರೀಕ್ಷೆ ಮತ್ತು ಔಷದೋಪಚಾರಗಳಿಗೆ ಸಂಬಂಧಿಸಿದ 14 ಬಿಲ್ಲುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ-8 ರಿಂದ 24 ಎಂದು ಗುರ್ತಿಸಲಾಯಿತು. 16 prescriptions ಗಳನ್ನು ಹಾಜರು ಮಾಡಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ-25 ಎಂದು ಗುರ್ತಿಸಲಾಯಿತು. 6 ಲ್ಯಾಬ ವರದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ-26 ಎಂದು ಗುರ್ತಿಸಲಾಯಿತು. 5 X-ray ವರದಿಗಳನ್ನು ಹಾಜರು ಮಾಡಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ-27 ಎಂದು ಗುರ್ತಿಸಲಾಯಿತು.

ಪಾಟೀ ಸವಾಲು **:** 4 ನೇ ಎದುರುದಾರ ಪರ ಶ್ರೀ ಪಿ.ವಿ.ಎಂ. ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು. ಉಳಿದ ಎದುರುದಾರ ಪರ ವಕೀಲರು ಗೈರು ಹಾಜರು. ಆದ್ದರಿಂದ ಅವರ ಪರವಾಗಿ ಸಹ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪುನ : ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ .

ಓ.ಹೇ.ಕೇ. ಸರಿ ಇದೆ

(ಶ್ರೀ ವಿ.ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಮೊಟಾರ ವಾಹನಗಳ ಅಪಘಾತ ಪರಿಹಾರ ನ್ಯಾಯಾಧೀಶರು, ಬೀದರ.

ದಿನಾಂಕ 15/10/2025 ರಂದು ಸಾಕ್ಷೀಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **:** 4 ನೇ ಎದುರುದಾರರ ಪರ ಶ್ರೀ ಪಿ.ವಿ.ಎಂ. ವಕೀಲರು :

3. ನಾನು 2 ನೇ ತರಗತಿಯವರೆಗೆ ಓದಿದ್ದೇನೆ. ಘಟನೆಯ ದಿನ ಮೋಟಾರ ಸೈಕಲನ್ನು ನಾನೇ ಓಡಿಸುತ್ತಿದ್ದೇ ಎಂದರೆ ಸರಿಯಲ್ಲ. ನನ್ನ ಹತ್ತಿರ ವಾಹನ ಚಾಲನ ಪರವಾನಿಗೆ ಇಲ್ಲ.

4. ಅಪಘಾತದ ನಂತರ ವಾಸು ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ 6 ದಿನ ಒಳರೋಗಿಯಾಗಿದ್ದೆ. ಆಸ್ಪತ್ರೆಯಲ್ಲಿ ನನ್ನ ಜೊತೆ ನನ್ನ ಮಾಮ ಇದ್ದರು. ಈ ಅಪಘಾತದಲ್ಲಿ ನಿಮಗೆ ಮಾತ್ರ ಪೆಟ್ಟಾಗಿದೆ ಎಂದರೆ ನನಗೆ ಬಹಳ ಪೆಟ್ಟಾಗಿದೆ ನನ್ನ ಮಾಮ ಜಾಫರ್ ಗೆ ಸ್ವಲ್ಪ ಪೆಟ್ಟಾಗಿದೆ ಎನ್ನುತ್ತಾರೆ.

5. ಅಪಘಾತ ಸ್ಥಳದಿಂದ ವಾಸು ಆಸ್ಪತ್ರೆ 3 ಕಿ.ಮೀ ದೂರದಲ್ಲಿದೆ ಎಂದರೆ ಸರಿ. ಅಪಘಾತ ಸ್ಥಳದಿಂದ ಟ್ರಾಫಿಲ್ ಪೊಲೀಸ್ ಠಾಣೆ 5 ಕಿ.ಮೀ ದೂರದಲ್ಲಿದೆ ಎಂದರೆ ಸರಿ.

6. ದೂರನ್ನು ನನ್ನ ಅಣ್ಣ ಕೊಟ್ಟಿದ್ದಾನೆ. ಮೋಟಾರ ಸೈಕಲನ್ನು ನಾನೇ ಓಡಿಸುತ್ತಿದ್ದೆ ಮತ್ತು ನನ್ನ ಹತ್ತಿರ ಲೈಸನ್ಸ ಇಲ್ಲದ್ದರಿಂದ ನನ್ನ ಅಣ್ಣನ ಕಡೆಯಿಂದ ಕೇಸ್ ಸೆಟ್ ಮಾಡಲು 2 ದಿವಸ ತಡ ಆಗಿದೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಸೇರಿ ಸುಳ್ಳು ಕೇಸನ್ನು ನಮಗೆ ಅನುಕೂಲವಾಗುವಂತೆ ತಯ್ಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ.

7. ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದೆ ಎಂದರೆ ಸರಿ. ಆಟೋ ಮತ್ತು ಮೋಟಾರ ಸೈಕಲ್ ಎದರು ಬದರು ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿದೆ. ಅಪಘಾತ ಸ್ಥಳದಲ್ಲಿ ರಸ್ತೆ ಬಹಳ ಅಗಲ ಇದೆ ಮತ್ತು ನೇರವಾಗಿ ಇದೆ ಎಂದರೆ ಸರಿ.

8. ನನಗೆ ಈಗ ಪೂರ್ಣ ಆರಾಮವಾಗಿದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಬಿಲ್ ಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

9. ನಾನು ಲೇಬರ್ ಎಂದರು ತೋರಿಸಲು ಲೇಬರ್ ಐಡೆಂಟಿ ಕಾರ್ಡ ಇಲ್ಲ. ವೈದ್ಯರಿಂದ ಸುಳ್ಳು ನ್ಯೂನ್ಯತೆಯ ಪ್ರಮಾಣ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲು **:** 2 ನೇ ಎದುರುದಾರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪುನ : ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ .

ಓ.ಹೇ.ಕೇ. ಸರಿ ಇದೆ

(ಶ್ರೀ ವಿ.ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಮೋಟಾರ ವಾಹನಗಳ ಅಪಘಾತ ಪರಿಹಾರ ನ್ಯಾಯಾಧೀಶರು, ಬೀದರ.

ದಿನಾಂಕ: 16-07-2026 ರಂದು ಮಧ್ಯಂತರ ಅರ್ಜಿಯ ಮೇರೆಗೆ ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು : 2 ನೇ ಎದುರುದಾರ ಪರ ಶ್ರೀ ವಿಲ್ಸನ್ ವಕೀಲರಿಂದ

10. ದಿನಾಂಕ: 10-06-2024 ರಂದು ಅಪಘಾತ ಸಂಭವಿಸಿದೆ. ನಾನು ದ್ವಿಚಕ್ರ ವಾಹನದ ಹಿಂಬದಿ ಸವಾರನ್ನಾಗಿ ಅಮಲಾಪೂರದಿಂದ ಗುಂಪಾಗೆ ಬರುತ್ತಿದ್ದೆ. ಸದರಿ ದ್ವಿಚಕ್ರ ವಾಹನ ನಂಬರ ನೆನಪಿಲ್ಲ ಸದರಿ ದ್ವಿಚಕ್ರ ವಾಹನ ನನ್ನ ಮಾವನಿಗೆ ಸೇರಿದಾಗಿದ್ದು ಆತನೇ ಚಾಲನೆ ಮಾಡುತ್ತಿದ್ದನು. ನನ್ನ ಮಾವನ ಹೆಸರು ಜಾಫರ. ನನ್ನ ಮಾವ ಬೇರೆಯವರಿಂದ ದ್ವಿಚಕ್ರ ವಾಹನ ವನ್ನು ಕೇಳಿ ಪಡೆದುಕೊಂಡಿದ್ದನು. ನನ್ನ ಮಾವನ ಬಳಿ ದ್ವಿಚಕ್ರ ವಾಹನ ಚಲಾಯಿಸಲು ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ ನನ್ನ ಮಾವನ ದ್ವಿಚಕ್ರ ವಾಹನದ ಚಾಲನಾ ಪರವಾನಿಗೆಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ.ನನ್ನ ಮಾವನ ಬಳಿ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗೆ ದ್ವಿಚಕ್ರ ವಾಹನ ಸರಿಯಾಗಿ ಚಾಲನೆ ಮಾಡಲು ಬರುತ್ತಿರಲಿಲ್ಲ, ಘಟನೆಯ ದಿನ ಆತನು ವಾಹನವನ್ನು ವೇಗವಾಗಿ ಚಲಾಯಿಸಿದ್ದು ನಿಯಂತ್ರಣ ತಪ್ಪಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ಟಾಟಾ ಎಎಸ್ ವಾಹನ ಸಂಖ್ಯೆ ಕೆಎ-33/ಎ-2065 ಈ ವಾಹನವು ಯಾವುದೆ ಸೂಚನೆಯನ್ನು ನೀಡದೇ ತಪ್ಪಾಗಿ ರಸ್ತೆಯಲ್ಲಿ ನಿಲ್ಲಿಸಿದ ಕಾರಣ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಟಾಟಾ ಎ.ಎಸ್. ವಾಹನ ಈ ಅಪಘಾತದಲ್ಲಿ ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನ್ನನ್ನು ವಾಸು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ವೈದ್ಯರಿಗೆ ಅಪಘಾತದ ವಿವರವನ್ನು ತಿಳಿಸಿದ್ದೇನೆ. ಅಪಘಾತವು ನನ್ನ ಮಾವನಾದ ಜಾಫರ ಇವರ ತಪ್ಪಿನಿಂದ ಆಗಿದ್ದು ಟಾಟಾ ಎ.ಎಸ್ ವಾಹನ ಸಂಖ್ಯೆ ಕೆಎ-33/ಎ-2065 ರ ಯಾವುದೇ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ. ಟಾಟಾ ಎ.ಎಸ್. ವಾಹನದ ಯಾವುದೇ ತಪ್ಪು ಇರಲಾರದ ಕಾರಣ ನಾನು ಆಸ್ಪತ್ರೆಯಲ್ಲಿ ಈ ವಿಚಾರ ಹೇಳಿಲ್ಲ ಎಂದರೆ ಸರಿಯಲ್ಲ. ನಾವು ಪ್ರಯಾಣ ಮಾಡುತ್ತಿದ್ದ ದ್ವಿಚಕ್ರ ವಾಹನ ಕ್ಕೆ ಯಾವುದೇ ವಿಮೆ ಇರಲಿಲ್ಲ ಮತ್ತು ನನ್ನ ಮಾವನ ಬಳಿ ವಾಹನ ಚಾಲನಾ ಪರವಾನಿಗೆ

ಇಲ್ಲದ ಕಾರಣ ನಂತರದಲ್ಲಿ ಮೇಲೆ ಹೇಳಿದ ಟಾಟಾ ಎ.ಎಸ. ವಾಹವನ್ನು ಈ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎ.ಎಸ್. ವಾಹನವನ್ನು ಈ ಪ್ರಕರಣದಲ್ಲಿ ತಪ್ಪಾಗಿ ಸೇರಿಸಬೇಕಾಗಿದ್ದರಿಂದ ದೂರು ನೀಡಲು ಮೂರು ದಿನಗಳ ಕಾಲ ವಿಳಂಬವಾಗಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಟಾಟಾ ಎ.ಎಸ್. ವಾಹನಕ್ಕೆ ರಸ್ತೆಯ ಮೇಲೆ ಸಂಚರಿಸಲು ಯಾವುದೆ ಪರ್ಮಿಟ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಟಾಟಾ ಎ.ಎಸ್. ವಾಹನದ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ನನಗೆ ಯಾವುದೆ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನನ್ನ ಮೊಳಕಾಲಿಗೆ ಮತ್ತು ಎದೆಯ ಭಾಗದಲ್ಲಿ ಗಾಯಗಳಾಗಿವೆ. ಚಿಕಿತ್ಸೆಗಾಗಿ ರೂ. 5.00 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಕಡಿಮೆ ಖರ್ಚಿನಲ್ಲಿ ನನಗೆ ಚಿಕಿತ್ಸೆ ಆಗಿದ್ದರೂ ಸಹ ವೈದ್ಯರೊಂದಿಗೆ ಶಾಮೀಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ಲಾಸ್ಟರಿಂಗ ಕೆಲಸ ಮಾಡುತ್ತಿದ್ದೆ ಮತ್ತು ಪ್ರತಿ ತಿಂಗಳು ರೂ. 25,000/- ದುಡಿಮೆ ಇತ್ತು ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯವನ್ನು ತೋರಿಸಲು ನನ್ನ ಬಳಿ ಯಾವುದೇ ಲಿಖಿತ ದಾಖಲೆ ಇಲ್ಲ. ನಾನು ಈ ಅಪಘಾತವಾಗುವ ಮೊದಲು ಹೇಗೆ ಕೆಲಸ ಮಾಡುತ್ತಿದ್ದೆನೋ ಈಗಲೂ ಸಹ ಅದೇ ರೀತಿ ನಾನು ಕೆಲಸ ಮಾಡಲು ಸಮರ್ಥನಿದ್ದೇನೆ ಎಂದರೆ ಸರಿಯಲ್ಲ. ವೈದ್ಯರೊಂದಿಗೆ ಶಾಮೀಲಾಗಿ ಅಂಗ ನ್ಯೂನತಾ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : -ಇಲ್ಲ-

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪುನ: ಓದಿ ಹೇಳಲಾಯಿತು

ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ .

ಓ.ಹೇ.ಕೇ. ಸರಿ ಇದೆ

(ಸ್ಯೆಯದ್ ಬಲೀಗುರ ರಹಮಾನ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
ಮೋಟಾರ ವಾಹನಗಳ ಅಪಘಾತ ಪರಿಹಾರ ನ್ಯಾಯಾಧೀಶರು, ಬೀದರ.